ಓ.ಎಸ್-80/2023 ಡಿ.ಡಬ್ಲ್ಯೂ-2 (ಶಿವಣ್ಣ)

ದಿನಾಂಕಃ **17.12.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ.ಎನ್.ಕೆ.ಎಸ್.ವಕೀಲರಿಂದ :**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

**ಪಾಟೀ ಸವಾಲು : ವಾದಿ ಪರ ಶ್ರೀ ಎಸ್.ಕೆ.ವಕೀಲರಿಂದ :**

ವಾದಿ, ಪ್ರತಿವಾದಿ ಹಾಗೂ ನಾನು ಬೇರೆ ಬೇರೆ ಜಾತಿಗೆ ಸೇರಿರುತ್ತೇವೆ. ವಾದಿ, ಪ್ರತಿವಾದಿ ಹಾಗೂ ನಮ್ಮ ಮನೆ ದೂರ ದೂರ ಇವೆ. ಸರ್ವೆ ನಂಬರ್ 13/1 ರಲ್ಲಿನ ಆಸ್ತಿಯನ್ನು ವಾದಿಗೆ ನನ್ನ ತಂದೆ ಮಾರಾಟ ಮಾಡಿದಾಗ, ಆ ವ್ಯವಹಾರಕ್ಕೆ ನಾನು ಭಾಗಿಯಾಗಿರುವುದಿಲ್ಲ. ಸದರಿ ಕ್ರಯಪತ್ರದಲ್ಲಿ ಬರೆದಿರುವ ಒಕ್ಕಣೆಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ಒಕ್ಕಣೆಯನ್ನು ನನ್ನ ತಂದೆ ತಿಳಿಸಿರುತ್ತಾರೆ. ನನಗೆ ಓದಲು, ಬರೆಯಲು ಬರುವುದಿಲ್ಲ. ನನ್ನ ತಂದೆ ಸರ್ವೆ ನಂಬರ್ 13/1 ರಲ್ಲಿನ 3½ ಗುಂಟೆ ಜಮೀನಿನಲ್ಲಿ ವಾದಿ ಚಿಕ್ಕತಾಯಮ್ಮರವರಿಗೆ 2 ಗುಂಟೆ, ಪ್ರತಿವಾದಿಗೆ 1½ ಗುಂಟೆ ಜಮೀನನ್ನು ಮಾರಾಟ ಮಾಡಿರುವುದಾಗಿ ನನಗೆ ಹೇಳಿದ್ದರು.

**2.** ದಾವಾ ಆಸ್ತಿಯಲ್ಲಿ ವಾದಿಯು ಮನೆ ಕಟ್ಟಿರುತ್ತಾರೆ ಎಂದರೆ ಸುಳ್ಳು. ದಾವಾ ಆಸ್ತಿಗೆ ವಾದಿಯನ್ನು ಹೊರತುಪಡಿಸಿ ಬೇರೆ ಯಾರೂ ಮಾಲೀಕರಲ್ಲ ಎಂದರೆ ಸರಿಯಲ್ಲ. 2006 ರಲ್ಲಿ ಸರ್ವೆ ಸ್ಕೆಚ್ ಆಗಿರುವುದಕ್ಕೆ ನಾನು ಸಾಕ್ಷಿದಾರರಲ್ಲ. ನಾನು ಹೇಳಿದಂತೆ ಯಾವುದೇ ಸರ್ವೆ ಸ್ಕೆಚ್ ನಡೆದಿಲ್ಲ ಎಂದರೆ

ಸುಳ್ಳು. ಪ್ರತಿವಾದಿ ನನಗೆ ಸ್ನೇಹಿತರು ಎಂದರೆ ಸುಳ್ಳು. ಪ್ರತಿವಾದಿಗೆ ಅನುಕೂಲವಾಗಲೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**